ವನ್ನು ಕಳುಹಿಸಿಕೊಟ್ಟು ಕೆರೆಯಿಂದ ನೀರನ್ನು ಹಾಯಿಸಿಕೊಂಡು ಮತ್ತು ಹಳ್ಳದಿಂದ ನೀರನ್ನು ಹಾಯಿಸಿ ಕೊಂಡು ಬೇಸಾಯವನ್ನು ಮಾಡುವ ರೈತರಿಗೆ ನೀರಿನ ತೆರಿಗೆಯನ್ನು ಹಾಕುವುದರಲ್ಲಿ ರಿಯಾಯಿತಿ ಕೊಡ ಬೇಕು. ಇದಕ್ಕೆ ಸಂಬಂಧಪಟ್ಟಂತೆ ಗ್ರಾಮ ಲೆಕ್ಕಾಧಿಕಾರಿಗಳು ಆಕಸ್ಮಿಕವಾಗಿ ಈ ರೀತಿಯಾಗಿ ಪಸೂಲು ಮಾಡಿದ್ದರೆ ಅವರಿಗೆ ಪುನಃ ವಾಪಸ್ಸು ಕೊಡಿಸಿಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಮತ್ತು ಮಣ್ಣು ಪರೀಕ್ಷೆಯ ವಿಷಯ. ಇದುವರೆಗೂ ಯಾವ ತಾಲ್ಲೂಕಿನಲ್ಲೂ ಮಣ್ಣು ಪರೀಕ್ಷೆ ಮಾಡಿಲ್ಲ. ಆದ್ದರಿಂದ ಇದಕ್ಕಾಗಿಯೇ ಒಂದು ಮೊಬೈಲ್ ಸ್ಕ್ವಾಡ್‌ನ್ನು ತೆಗೆದುಕೊಂಡು ಅವರನ್ನು ಪ್ರತಿಯೊಂದು ತಾಲ್ಲೂಕಿಗೆ ಕಳುಹಿಸಿಕೊಟ್ಟು ಸಂಬಂಧಪಟ್ಟ ಕ್ಷೇತ್ರಾಭಿವೃದ್ಧಿ ಅಧಿಕಾರಿ ಹಾಗೂ ತಹಸೀಲ್ದಾರ್‌ರವರನ್ನು ಇವರುಗಳುಗಳ ಸಹಾಯವನ್ನು ತೆಗೆದುಕೊಂಡು ಮಣ್ಣು ಪರೀಕ್ಷೆ ಮಾಡುವ ವ್ಯವಸ್ಥೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಸೂಚನೆ ಮಾಡುತ್ತೇನೆ.

ಇನ್ನು ಡೆಮಾನ್ಸ್‌ಟ್ರೇಷನ್ ಪ್ಲಾಟ್ಸ್ ಆದಷ್ಟು ಮಟ್ಟಿಗೆ ಶ್ರೀಮಂತರಿಗೇ ಮೀಸಲಾಗಿರತಕ್ಕಂಥ ಡೆಮಾನ್ಸ್‌ಟ್ರೇಷನ್ ಪ್ಲಾಟ್ಸ್‌ಗಳಾಗಿವೆ. ಅವನ್ನು ಸಣ್ಣ ರೈತರಿಗೂ ಮತ್ತು ಮಾರ್ಜಿನಲ್ ಫಾರ್ಮರ್ಸ್‌ಗೂ ಅವಕಾಶವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಇದುವರೆಗೂ ಶ್ರೀಮಂತರೇ ಹೆಚ್ಚಿನ ರೀತಿಯಲ್ಲಿ ಡಮಾನ್‌ಸ್ಟ್ರೇಷನ್ ಪ್ಲಾಟ್ಸ್‌ನ್ನು ತೆಗೆದುಕೊಂಡು ಗೊಬ್ಬರ ಮತ್ತು ಔಷಧಿ ಹಾಗೂ ಇತರೇ ರೀತಿಯ ಹೆಚ್ಚಿನ ಸವಲತ್ತುಗಳನ್ನು ಹೊಂದಿದ್ದಾರೆ. ಇದರ ಬಗ್ಗೆ ತಾವು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಅಧಿಕಾರಿಗಳ ಬಗ್ಗೆ ಮಾನ್ಯ ಸದಸ್ಯರು ಈಗಾಗಲೇ ಹೇಳಿದ್ದಾರೆ. ಯಾವ ಅಧಿಕಾರಿಯೂ ಹೊಲಕ್ಕೆ ಹೋಗುವುದಿಲ್ಲ. ಆತನು ತನ್ನ ಕಛೇರಿಯಲ್ಲೇ ಕುಳಿತುಕೊಂಡು ರಿಪೋರ್ಟ್ ಬರೆಯುತ್ತಾರೆ. ಎಷ್ಟೋ ಎ.ಇ.ಒ. ಗಳು ಸ್ಯಾಂಪಲ್‌ಗಾಗಿ ಕೊಟ್ಟಂತಹ ಗೊಬ್ಬರ ಔಷಧಿಗಳನ್ನು ತನ್ನ ಹೊಲಗಳಿಗೆ ಉಪಯೋಗಿಸಿಕೊಂಡು ಹೆಚ್ಚಿನ ಲಾಭವನ್ನು ಮಾಡಿಕೊಳ್ಳುತ್ತಾರೆ. ಯಾವ ರೈತನಿಗೂ ಗೊಬ್ಬರ ಮುಟ್ಟಿಲ್ಲ. ಔಷಧಿ ಮುಟ್ಟಿಲ್ಲ. ಆ ಪ್ರಕಾರವಾಗಿರತಕ್ಕಂಥ ಅವ್ಯವಸ್ಥೆಯನ್ನು ತಾವು ದಯಮಾಡಿ ತಡೆಗಟ್ಟಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಗೆ ಸೂಚನೆ ಕೊಡುತ್ತಿದ್ದೇನೆ. ಮತ್ತೆ ಸಾಯಿಲ್ ಕನ್‌ಸರ್ವೇಷನ್ ಬಗ್ಗೆ ಹೇಳುವುದಾದರೆ ತಾವು ಹಾಕಿರತಕ್ಕಂಥ ಬದುಗಳು ಈವತ್ತು ಸಮ ನಾಗಿವೆ. ಮತ್ತು ಬೀಜಗಳ ಬಗ್ಗೆ ಹೇಳಬೇಕಾದರೆ ಯಾವುದೇ ಬಿತ್ತನೆ ಬೀಜಗಳನ್ನು ತೆಗೆದುಕೊಂಡರೂ ಎಲ್ಲದರಲ್ಲೂ ಕಲಬೆರಿಕೆಯಾಗಿದೆ. ಜೋಳ, ಬತ್ತ, ಹೈಬ್ರಿಡ್ ಜವಾರ್ ಪ್ರತಿಯೊಂದರಲ್ಲೂ ಆಡಲ್ಟ್ರೇಷನ್‌ಯಾಗಿರುತ್ತದೆ. ಇದರಿಂದ ಪ್ರತಿಯೊಬ್ಬ ರೈತರಿಗೆ ಹೆಚ್ಚಿನ ಲಾಭಸಿಗುತ್ತಿಲ್ಲ. ಬಿತ್ತನೆ ಬೀಜಗಳ ಹೆಚ್ಚಿನ ಮುತುವರ್ಜಿವಹಿಸಿ ಕಲಬೆರಿಕೆಯಾಗದಂತೆ ತಾವು ಕ್ರಮ ತೆಗೆದುಕೊಳ್ಳಬೇಕು. ಬಿತ್ತನೆ ಬೀಜ ಗಳನ್ನು ಸರ್ಕಾರದವರು ಸಹಕಾರಿ ಸಂಘಗಳ ಮೂಲಕ ಮತ್ತು ತಾಲ್ಲೂಕು ಬೋರ್ಡ್ ಮೂಲಕ ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ರೈತರಿಗೆ ಬೇರೆ ಬೇರೆ ರೀತಿಯ ವ್ಯವಸ್ಥೆಯನ್ನು ಮಾಡುವುದಕ್ಕೆ ರೈತರ ದೃಷ್ಟಿಯಿಂದ ರೈತರ ಹಿತದೃಷ್ಟಿಯಿಂದ, ರೈತರ ಬಗ್ಗೆ ಹೆಚ್ಚಿನ ತಿಳುವಳಿಕೆ ಇರತಕ್ಕಂಥ ಅಧಿಕಾರಿಗಳಿಗೆ ಹೆಚ್ಚಿನ ಜವಾಬ್ದಾರಿಯನ್ನು ಕೊಟ್ಟು ರೈತರ ಹಿತ ದೃಷ್ಟಿಯನ್ನು ಕಾಪಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ ಇಷ್ಟು ಸಮಯ ಮಾತನಾಡಲು ಅವ ಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

(MR. SPEAKER in the chair)

Business of the House

Announcement

MR. SPEAKER.— The Business Advisory Committee which met to-day have recommended the following programme of business for the House between 24th July and 31st July 1978.—

24th July	Discussion and Voting of Demands relating to the Minister for Agriculture.

25th July	Morning :—From 9 A.M. to 1 P.M. Discussion and Voting of Demands relating to the Minister for Excise and Labour. Afternoon :—From 3 P.M. to 6 P.M. Discussion of the Demands relating to the Minister for Industries.
26th July	Morning :—From 9 A.M. to 1 P.M. Discussion and Voting of Demands relating to the Minister for Industries. Afternoon :—From 3 P.M. to 6 P.M. Discussion of the Demands relating to the Chief Minister and Minister for Finance.
27th and 28th July	Discussion of all Demands concerning the Chief Minister and Financ Minister.
29th July	Reply by the Chief Minister and Minister for Finance and Voting of all Demands relating to the Chief Minister and Minister for Finance and Appropriation Bill.
31st July	Discussiou of Bill relating to the replacement of Ordinances.

Budget Estimates for 1978-79

Demand for Grants

(Debate Continued)

Demand Nos. 1, 3, 33 and 35

† ಶ್ರೀ ಕೆ. ರಾಮಭಟ್ (ಪುತ್ತೂರ್),—ಮಾನ್ಯ ಅಧ್ಯಕ್ಷರೇ, ನಾನು ಪ್ರಾರಂಭದಲ್ಲಿ ಒಂದೂ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆದೇನೆಂದರೆ ನಮ್ಮ ರಾಜ್ಯದಲ್ಲಿ ಇನ್ನು ೨–೩ ವರ್ಷಗಳಲ್ಲಿ ಭೀಕರವಾದ ಆಹಾರದ ಕೊರತೆ ನಿರ್ಮಾಣವಾಗುವಂತೆ ಲಕ್ಷಣಗಳಿವೆ. ಏಕೆಂದರೆ ಇವತ್ತು ಯಾರ್ಯಾರು ವ್ಯವಸಾಯವನ್ನು ಮಾಡುತ್ತಿದ್ದಾರೆ ಅವರಿಗೆ ಇರುವಂತಹ ಉತ್ಸಾಹ ದಿನೇ ದಿನೇ ಕಡಿಮೆಯಾಗುತ್ತಿದೆ. ಮತ್ತೆ ಇವತ್ತಿನ ದಿವಸ ಯಾರು ವ್ಯವಸಾಯವನ್ನು ಮಾಡುತ್ತಿದ್ದಾರೆ ಅದನ್ನು ಬಿಡಲಿಕ್ಕೆ ಪ್ರಯತ್ನ ಪಡುತ್ತಿದ್ದಾರೆ. ಏಕೆಂದರೆ ನಾನೂ ಒಬ್ಬ ರೈತನಾಗಿ ನಮ್ಮ ಭೂಮಿಯಲ್ಲಿ ಬೆಳೆದಂತಹ ಮಾಲಿಗೆ ಸರಿಯಾದ ಬೆಲೆಯಿಲ್ಲ. ಅಂದರೆ ನಾವು ಬೆಳೆಯುವ ಬತ್ತಕ್ಕೆ ಸರಿಯಾದ ಬೆಲೆಯಿಲ್ಲ ಅದರಿಂದ ಅದರ ಬದಲು ಬೇರೆ ಯಾವುದಾದರೂ ಕಮರ್ಷಿಯಲ್ ಕ್ರಾಪ್‌ನ್ನು ಬೆಳೆದರೆ ಹೆಚ್ಚಿನ ಲಾಭ ಬರುತ್ತದೆ ಎನ್ನುವ ಅಭಿಪ್ರಾಯವನ್ನು ಹೊಂದಿದ್ದಾರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಇವತ್ತು ರೈತರು ಬೆಳೆದಂತಹ ಬತ್ತಕ್ಕೆ ಸರಿಯಾದ ಬೆಲೆ ಪ್ರೋತ್ಸಾಹ ದಾಯಕವಾಗಿಲ್ಲ. ಎನ್ನುವ ಮಾತನ್ನು ಹೇಳಬೇಕಾಗಿದೆ. ಬತ್ತಕ್ಕೆ ಹೆಚ್ಚಿನ ಬೆಲೆ ಸಿಕ್ಕುತ್ತಿಲ್ಲ. ಇದರಿಂದ ರೈತರು ಚಳುವಳಿ ಮಾಡುವಂತಹ ದಿನವನ್ನು ನಾವು ನೋಡಬೇಕಾಗುತ್ತದೆ. ಆಹಾರಧಾನ್ಯಕ್ಕೆ ಹೆಚ್ಚಿನ ಬೆಲೆ ಸಿಕ್ಕುವಂತಹ ವ್ಯವಸ್ಥೆ ಮಾಡಬೇಕು, ಅಥವಾ ಅದರ ಬದಲಾಗಿ ರೈತರಿಗೆ ಆಗುವಂತಹ ಖರ್ಚುಗಳು ಕಡಿಮೆಯಾಗುವಂತೆ ಯಾವುದಾದರೂ ವ್ಯವಸ್ಥೆಯನ್ನು ಮಾಡಬೇಕೆಂದು ಮಾನ್ಯ ವ್ಯವಸಾಯ ಮಂತ್ರಿಗಳಲ್ಲಿ ವಿನಂತಿಸುತ್ತೇನೆ.